699(1151) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಹಲವು ವರ್ಷಗಳಿಂದ ಗಣಿಗಾರಿಕೆ ಮಾಡಿದ ಜಾಗದಲ್ಲಿ ತಗ್ಗು ಗುಂಡಿಗಳಿಂದ ಧನಕರುಗಳು ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದುವರೆವಿಗೂ ಗಣಿಗಾರಿಕೆ ಮಾಡಿ ಗುಂಡಿ ತೋಡಿದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಗುಂಡಿಗಳನ್ನು ಮುಚ್ಚದಿರಲು ಕಾರಣಗಳೇನು;

ಈ) ಯಾವಾಗ ಈ ಗುಂಡಿಗಳನ್ನು ಮುಚ್ಚಲಾಗುವುದು (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬಂದಿರುವುದಿಲ್ಲ.

ಆ) ಅವಧಿ ಮುಗಿದ ಕೆಲವು ಪ್ರಕರಣಗಳಲ್ಲಿ ಗಣಿಗಾರಿಕೆಯಿಂದಾದ ಗುಂಡಿಗಳನ್ನು ಮುಚ್ಚಲು ನೋಟೀಸ್‌ಗಳನ್ನು ನೀಡಲಾಗಿದೆ ಹಾಗೂ ಜಾಲ್ತಿಯಲ್ಲಿರುವ ಗುತ್ತಿಗೆಗಳ ಅವಧಿ ಮುಕ್ತಾಯವಾದ ನಂತರ ಗುಂಡಿಗಳನ್ನು ಮುಚ್ಚಿ ಸಮತಟ್ಟು ಮಾಡಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ.

ಇ) ಬಹುಶಃ ಸದರಿ ಗುಂಡಿಗಳಲ್ಲಿ ನೀರು ತುಂಬುವುದರಿಂದ ಅಂತರ್ಜಲ ಅಭಿವೃದ್ಧಿಯಾಗುವ ಸಾಧ್ಯತೆ ಇರುವುದೆಂದು ತಿಳಿದು, ಗುಂಡಿಗಳನ್ನು ಮುಚ್ಚದೆ ಬಿಟ್ಟಿರುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಈ) ಅವಧಿ ಮುಕ್ತಾಯವಾದ ಗಣಿಗುತ್ತಿಗೆದಾರರಿಗೆ ಗುಂಡಿಗಳನ್ನು ಮುಚ್ಚಲು ಹಲವು ಪ್ರಕರಣಗಳಲ್ಲಿ ನೋಟೀಸ್ ನೀಡಲಾಗಿದೆ. ಈ ಬಗ್ಗೆ ಸ್ಥಳ ಪರಿಶೀಲಿಸಿ ಗುಂಡಿಗಳನ್ನು ಮುಚ್ಚುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

700(1152) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಪ್ರಸಿದ್ಧ ಯಾತ್ರ ಸ್ಥಳವಾದ ಜೋಗದಲ್ಲಿರುವ ಕೆ.ಪಿ.ಸಿ. ವಸತಿ ನಿಲಯಗಳು ಸಂಪೂರ್ಣ ಹಾಳಾಗಿ ಬಿದ್ದುಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ;

ಆ) ಈ ವಸತಿ ನಿಲಯಗಳನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು)?